# ಅಳಿಲಿನ ಅಳಲು



■ ಶಶಿರೇಖಾ ನಾಗೇಂದ್ರ
ಕಲೆ: ಸಂತೋಷ್ ಸಸಿಹಿತ್ಲು

ಸಹ್ಯಾದ್ರಿ ಕಾಡಿನ ಮರವೊಂದರಲ್ಲಿ ಹಲವಾರು ಪ್ರಾಣಿಪಕ್ಷಿಗಳು ಗೂಡುಕಟ್ಟಿಕೊಂಡು ವಾಸ ಮಾಡುತ್ತಿದ್ದವು. ಅಲ್ಲಿ ಎರಡು ಅಳಿಲುಗಳು ಸಹ ನೆಲೆಯನ್ನು ಕಂಡುಕೊಂಡಿದ್ದವು. ಆ ಅಳಿಲುಗಳು ಹಸಿವಾದಾಗ ಮರದಲ್ಲಿನ ಹಣ್ಣುಗಳನ್ನು ತಿಂದು ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತ ಸಂತೋಷವಾಗಿದ್ದವು. ಆ ಮರದ ಮೇಲಿನ ಕೊಂಬೆಯ ತುದಿಯ ಸಂಧಿಯಲ್ಲಿ ಕಾಗೆಯೊಂದು ಬಂದು ಗೂಡುಕಟ್ಟಿತ್ತು. ದಿನಕಳೆದಂತೆ ಅಳಿಲುಗಳ ಮೇಲೆ ಕಾಗೆಯ ಕಣ್ಣು ಬಿತ್ತು. ಮರದಿಂದ ಮರಕ್ಕೆ ಎಷ್ಟು ಸಂತೋಷದಿಂದ ಜಿಗಿಯುತ್ತಾ ಬದುಕುತ್ತಿವೆ. ಏನಾದರು ಮಾಡಿ ಈ ಅಳಿಲುಗಳನ್ನು ಹಿಡಿದು ತಿನ್ನಬೇಕೆಂದು ಆಸೆಪಟ್ಟಿತು. ಅದಕ್ಕೆ ಹೊಂಚು ಹಾಕಿ ಅವುಗಳ ಬೆನ್ನಟ್ಟಿ ಹೋಯಿತು. ಅಳಿಲುಗಳು ಚಂಗನೆ ನೆಗೆದು ಗೂಡು ಸೇರಿಕೊಂಡವು.

ಕಾಗೆ, ಅಳಿಲುಗಳನ್ನು ಕಂಡಾಗಲೆಲ್ಲಾ ಅಟ್ಟಿಸಿಕೊಂಡು ಹೋಗುತ್ತಿತ್ತು. ಅಳಿಲುಗಳಿಗೆ ಕಾಗೆ ತಮ್ಮ ಬೆನ್ನು ಬಿದ್ದಿರುವುದು ತಿಳಿಯಿತು. ಆದಷ್ಟು ಕಾಗೆಯ ಕಣ್ಣಿನಿಂದ ತಪ್ಪಿಸಿಕೊಂಡು ಒಡಾಡುತ್ತಿದ್ದವು. ಕಾಗೆ ಅಳಿಲುಗಳ ಗೂಡಿನ ಪಕ್ಕವೆ ಒಡಾಡುವುದನ್ನು ಕಂಡು ಗಂಡು ಅಳಿಲು ಹೊರ ಬಂದು ‘ಕಾಕಾರಾಜ, ನೀನೇಕೆ ನಮ್ಮ ಹಿಂದೆ ಬಿದ್ದಿರುವೆ? ನಮ್ಮಿಂದ ಏನಾದರೂ ತಪ್ಪಾಗಿದೆಯಾ? ಹಾಗೆ ತಪ್ಪಾಗಿದ್ದರೆ ಕ್ಷಮಿಸು. ನಮಗೆ ತೊಂದರೆ ಕೊಡಬೇಡ. ನಾವು ಕೂಡ ಯಾರಿಗೂ ತೊಂದರೆ ಮಾಡುತ್ತಿಲ್ಲ. ನಮ್ಮ ಪಾಡಿಗೆ ನಾವಿದ್ದೇವೆ’ ಎಂದಿತು. ಕಾಗೆ ‘ನನಗೆ ಬರೀ ಹಣ್ಣುಹಂಪಲು ತಿಂದು ಬೇಜಾರಾಗಿದೆ. ಅವುಗಳಿಂದ ಹೊಟ್ಟೆ ತುಂಬಿದಂತೆ ಅನ್ನಿವುದೇ ಇಲ್ಲ. ನನಗೀಗ ಮಾಂಸ ಬೇಕು ಅದಕ್ಕೆ ನಿಮ್ಮನ್ನು ತಿನ್ನಲು ಬಂದಿರುವೆ’ ಎಂದು ಗರ್ವದಿಂದ ಹೇಳಿತು. ‘ನೋಡು ಕಾಕಾರಾಜ, ನಮ್ಮದು ಪುಟ್ಟ ಶರೀರ. ನಮ್ಮನ್ನು ತಿನ್ನುವುದರಿಂದ ನಿನ್ನ ಹೊಟ್ಟೆ ತುಂಬುವುದಿಲ್ಲ. ನೀನು ದೊಡ್ಡ ಪಕ್ಷಿಯನ್ನು ಬೇಟೆಯಾಡು ನಮ್ಮನ್ನು ಬಿಟ್ಟುಬಿಡು’ ಎಂದಿತು ಅಳಿಲು.

ಆಗ ಕಾಗೆ ‘ಸರಿ. ಹಾಗಾದರೆ ನಿಮ್ಮನ್ನು ಬಿಟ್ಟುಬಿಡುತ್ತೇನೆ. ನನಗೆ ಪ್ರತಿದಿನ ತಿನ್ನಲು ಮಾಂಸವನ್ನು ನೀವೆ ತಂದು ಕೊಡಿ’ ಎಂದಿತು. ಆಗ ಅಳಿಲು ‘ನಾವು ಸಸ್ಯಾಹಾರಿಗಳು ನಿನಗೆ ಮಾಂಸವನ್ನು ಎಲ್ಲಿಂದ ತಾನೆ ತಂದುಕೊಡುವುದು? ಈ ಕಾಡಿನಲ್ಲಿ ನಿನ್ನಂತೆ ನಮಗೂ ಬಾಳುವ ಹಕ್ಕಿದೆ ಎಂದಿತು. ಹೆಣ್ಣು ಅಳಿಲು ಹೊರ ಬಂದು ‘ಕಾಕಾರಾಜ, ನಿನ್ನನ್ನು ಕಂಡರೆ ನಮಗೆ ಭಯವಾಗುತ್ತದೆ. ನೀನು ಬದುಕು ನಮ್ಮನ್ನು ಬದುಕಲು ಬಿಡು. ನೀನು ನಮ್ಮನ್ನು ತಿಂದರೆ ನಾವು ನಮ್ಮ ಸಂತತಿಯನ್ನು ಬೆಳೆಸುವುದಾದರು ಹೇಗೆ?’ ಎಂದಿತು. ಅದೆಲ್ಲಾ ಆಗಲ್ಲ. ನಿಮ್ಮನ್ನ ನಾನು ತಿನ್ನುನೆ ಎಂದು ಅಬ್ಬರಿಸಿದಾಗ, ಅಳಿಲುಗಳು ಕನಲಿದವು. ದೀನ ದನಿಯಲ್ಲಿ ‘ನೀನು ನಮ್ಮನ್ನು ತಿಂದರೆ ನಿನ್ನನ್ನು ತಿನ್ನಲು ಭಗವಂತ ಬೇರೊಬ್ಬರನ್ನು ಇಟ್ಟಿರುತ್ತಾನೆ. ನಾವು ಸಸ್ಯಾಹಾರಿಗಳು, ಮಾಂಸವನ್ನು ಹೇಗೆ ತಂದುಕೊಡಲು ಅಗುತ್ತದೆ...’ ಹೀಗೆ ಕಾಗೆ ಅಳಿಲಿನ ವಾದ ವಿವಾದಗಳು ನಡೆದಿದ್ದವು. ಹಾವೊಂದು ಮರವೇರಿ ಕಾಗೆಯ ಗೂಡಿನತ್ತ ಹೋಗುತ್ತಿತ್ತು. ಅದನ್ನು ನೋಡಿದ ಹೆಣ್ಣು ಅಳಿಲು ಅಯ್ಯೋ ‘ಕಾಕಾರಾಜ, ಹಾವು ನಿನ್ನ ಗೂಡಿನತ್ತ ಹೋಗುತ್ತಿದೆ. ನಿನ್ನ ಮರಿಗಳನ್ನು ತಿನ್ನುತ್ತದೆ. ಬೇಗ ಹೋಗು ನಿನ್ನ ಮರಿಗಳನ್ನು ಹಾವಿನಿಂದ ಕಾಪಾಡಿಕೊ’ ಎಂದಿತು. ಗಾಬರಿಯಾದ ಕಾಗೆ ಗೂಡಿನತ್ತ ಹಾರಿ ಬಂದು ಹಾವನ್ನು ತನ್ನ ಕೊಕ್ಕಿನಿಂದ ಕುಕ್ಕಿ ಕುಕ್ಕಿ ಓಡಿಸಿತು.

ಗೂಡಿನಲ್ಲಿ ಮರಿಗಳು ಸುರಕ್ಷಿತವಾಗಿ ಆಡುತ್ತಿರುವುದನ್ನು ನೋಡಿತು. ಅಳಿಲು ಹಾವಿನ ವಿಷಯ ಹೇಳದಿದ್ದರೆ ಹಾವು ನನ್ನ ಮರಿಯನ್ನು ತಿಂದು ಬಿಡುತ್ತಿತ್ತು. ಅಳಿಲಿಗೆ ಧನ್ಯವಾದ ಹೇಳಬೇಕು ಎಂದುಕೊಂಡು ಅಳಿಲಿನ ಗೂಡಿನ ಹತ್ತಿರ ಬಂದಿತು. ಅಳಿಲುಗಳು ಕಾಗೆಯನ್ನು ಕಂಡು ‘ಕಾಕಾರಾಜ ಹಾವಿನಿಂದ ನಿನ್ನ ಮರಿಗಳಿಗೆ ಏನು ತೊಂದರೆಯಾಗಲಿಲ್ಲವೆ? ಅಬ್ಬಾ ದೇವರು ದೊಡ್ಡವನು’ ಎಂದವು. ಅಳಿಲುಗಳ ಉದಾರ ಬುದ್ಧಿಯನ್ನು ಕಂಡು ಕಾಗೆ ನಾಚಿಕೆಯಿಂದ ತಲೆ ತಗ್ಗಿಸಿ ‘ನೀನು ಹೇಳದಿದ್ದರೆ ಹಾವು ಇಂದು ನನ್ನ ಮರಿಗಳನ್ನು ತಿಂದು ಬಿಡುತಿತ್ತು. ನಿಮ್ಮಿಂದ ತುಂಬಾ ಉಪಕಾರವಾಯಿತು ನಿಮಗೆ ನಾನು ತೊಂದರೆ ಕೊಟ್ಟರು ಸಹ ಅದನ್ನು ಮನಸ್ಸಿನಲ್ಲಿ ಇಟ್ಟಕೊಳ್ಳದೆ ನನಗೆ ಸಹಾಯ ಮಾಡಿದ್ದೀರಿ. ನಾನು ಇನ್ನೆಂದಿಗೂ ನಿಮಗೆ ತೊಂದರೆ ಕೊಡುವುದಿಲ್ಲ. ನನ್ನ ಕ್ಷಮಿಸಿ’ ಎಂದಿತು. ಅಳಿಲುಗಳು ‘ಕಷ್ಟದಲ್ಲಿದ್ದಾಗ ನಾವು ಒಬ್ಬರಿಗೊಬ್ಬರು ಸಹಾಯ ಮಾಡಬೇಕು. ಇನ್ನು ಮುಂದೆ ನಾವೆಲ್ಲ ಸ್ನೇಹಿತರಾಗಿರೋಣ’ ಎಂದವು. ಕಾಗೆ ಸಂತೋಷದಿಂದ ಒಪ್ಪಿಕೊಂಡಿತು. ■

